ಮಾಡುತ್ತಿದ್ದಾಗ ಶ್ರೀ ಬಿ.ಎನ್. ವೆಂಕಟರಮಣ ಗೌಡ ಮತ್ತು ಇತರೆ 11 ಜನರು ಹಾಗೂ ಶ್ರೀ ಟಿ.ಕೆ. ನಾರಾಯಣಸ್ವಾಮಿ ಮತ್ತು 5 ಜನರು ತಿಮ್ಮೇನಹಳ್ಳಿ ಗ್ರಾಮಸ್ಥರು ಅಲ್ಲದೆ ಚಿಕ್ಕತಮ್ಮಣ್ಣ ಮತ್ತು ಶ್ರೀನಿವಾಸ, ತಣಿಯೂರು ಗ್ರಾಮ ಇವರೆಲ್ಲರೂ ಈ ಹಿಂದಿನ ರಾಜಕೀಯ ದ್ವೇಶದಿಂದಾಗಿ ಮಾರಕಾಸ್ತ್ರಗಳನ್ನು ಹಿಡಿದು ತಮ್ಮ ಜಮೀನಿಗೆ ಬಂದು ತಾವು ಬೆಳೆದಿದ್ದು ಅಲೂಗಡ್ಡೆ, ಬದನೇಕಾಯಿ ಇನ್ನಿತರೆ ಬೆಳೆಯನ್ನು ನಾಶಪಡಿಸಿದ್ದಲ್ಲದೆ ಪೆಲಿಥೀನ್ ಕೊಳವೆ ಹಾಗೂ ಇನ್ನಿತರ ತೋಟದ ಮನೆಯಲ್ಲಿದ್ದ ವಿದ್ಯುತ್ ಉಪಕರಣಗಳನ್ನು ದೋಚಿದ್ದಾರೆಂದು ತಿಳಿಸಿರುತ್ತಾರೆ. ಈ ಮೇರೆಗೆ ನಂದಗುಡಿ ಪೋಲೀಸ್ ಠಾಣೆ ಅಪರಾಧ ಸಂಖ್ಯೆ : 10:91 ಕಲಂ 143, 147, 148, 149, 447, 427, 425, 448 395 ಐ.ಪಿ.ಸಿ. ಮೇರೆಗೆ ಮೊಕದ್ದಮೆ ದಾಖಲು ಮಾಡಿಕೊಳ್ಳಲಾಗಿದೆ.

ಅಲ್ಲದೆ ಆರೋಪಿತ ವ್ಯಕ್ತಿಗಳು ಅರ್ಜಿದಾರರ ಮನೆಗೂ ನುಗ್ಗಿದ್ದು, ಆಲ್ಮೇರ ಹಾಗೂ ಮುಂಬಾಗಿಲನ್ನು ಹೊಡೆದುಹಾಕಿದ್ದಲ್ಲದೆ ಮನೆಯ ಮುಂದಿದ್ದ ಎತ್ತಿನ ಗಾಡಿಯನ್ನು ಸುಟ್ಟುಹಾಕಿ ಕೆಲವು ವಸ್ತುಗಳನ್ನು ದೋಚಿದ್ದು ಒಟ್ಟು ರೂ. 75,000-00 ನಷ್ಟಗೊಳಿಸಿರುವುದಾಗಿ ಆರೋಪಿಸಿದ್ದಾರೆ. ಈ ಸಂದರ್ಭದಲ್ಲಿ ಅರ್ಜಿದಾರರಿಗೆ ಮತ್ತು ಅವರ ಕುಟುಂಬದವರಿಗೆ ದೈಹಿಕವಾಗಿ ಯಾವುದೇ ಗಾಯಗಳು ಆಗಿರುವುದಿಲ್ಲ. ದಿನಾಂಕ 27-2-1991ರಂದು ಪೋಲೀಸರು ಆರೋಪಿತ ವ್ಯಕ್ತಿಗಳನ್ನು ಬಂಧಿಸಿರುವುದಲ್ಲದೆ 107ನೇ ಸಿ.ಆರ್.ಪಿ.ಸಿ. ಮೇರೆಗೆ ಅಪರಾಧ ಸಂಖ್ಯೆ 15:91 ರಲ್ಲಿ ಕೇಸು ದಾಖಲು ಮಾಡಿದ್ದಾರೆ.

ಬೆಂಗಳೂರಿನ ಅಡಿಷನಲ್ ಎಸ್.ಪಿ., ಡಿ.ವೈ.ಎಸ್.ಪಿ. ಸ್ಥಳಕ್ಕೆ ಭೇಟಿ ಕೊಟ್ಟಿದ್ದು ತನಿಖೆ ಬಗ್ಗೆ ಸೂಕ್ತ ಸೂಚನೆಗಳನ್ನು ನೀಡಿರುತ್ತಾರೆ. ಪೋಲೀಸ್ ಬಂದೋಬಸ್ತನ್ನು ಮಾಡಿದ್ದು, ಅರ್ಜಿದಾರರು ಮತ್ತು ಕುಟುಂಬದವರು ಗ್ರಾಮಕ್ಕೆ ಬಂದಿರುವುದಿಲ್ಲ. ಸೂಕ್ತ ರಕ್ಷಣೆಗೆ ವ್ಯವಸ್ಥೆ ಮಾಡಲಾಗಿದೆ.

ದಿನಾಂಕ 25.9.1991 ರಂದು ಶ್ರೀ ಬಚ್ಚಣ್ಣ ಬಿನ್ ಮುನಿಕೆಂಪಣ್ಣ, ಬೆಂಡಿಗಾನಹಳ್ಳಿ ಗ್ರಾಮ ಇವರು ನೀಡಿದ ದೂರಿನ ಮೇರೆಗೆ ನಂದಗುಡಿ ಪೋಲೀಸ್ ಠಾಣೆ ಅಪರಾಧ ಸಂಖ್ಯೆ : 9:91ರಲ್ಲಿ ತನಗೆ 18-1-1991ರಂದು ಊರಿಗೆ ವಾಪಸ್ಸು ಬರುತ್ತಿದ್ದಾಗ ಎಸ್. ಗೋಪಾಲಗೌಡ ಮತ್ತು ಅವರ ಕುಟುಂಬದವರು ಕಬ್ಬಿಣದ ಸಲಾಕೆ ಮತ್ತು ಕುಡುಗೋಲಿನಿಂದ ತಲೆಗೆ ಹೊಡೆದಿರುವುದಾಗಿ ತಿಳಿಸಿರುತ್ತಾರೆ. ಈ ಮೇಲಿನ ಪ್ರಕರಣಗಳ ಮೊಕದ್ದಮೆ ಸಂಖ್ಯೆ 9:91 ಮತ್ತು 10:91 ಈ ಎರಡೂ ಪ್ರಕರಣಗಳು ತನಿಖೆಯಲ್ಲಿವೆ.

(8) ಹೆಚ್ಚಿನ ಪದವಿ ಗಳಿಸಿದ ಅಧ್ಯಾಪಕರಿಗೆ ಬಡ್ತಿ ಅವಕಾಶ ಕಲ್ಪಿಸುವುದು.

12.50 ಪಿ.ಎಂ.

ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಅಧ್ಯಕ್ಷರೆ, ವೃತ್ತಿನಿರತ ಅಧ್ಯಾಪಕರು ತಮ್ಮ ಉದ್ಯೋಗದಲ್ಲಿರುವಾಗಳೇ ಶ್ರಮಪಟ್ಟು ಅಧ್ಯಯನ ನಡೆಸಿ ಹೆಚ್ಚಿನ ವಿದ್ಯಾರ್ಹತೆ ಗಳಿಸಿದಾಗ ಅವರಿಗೆ ಮುಂದಿನ ಶ್ರೇಣಿಗೆ ಬಡ್ತಿ ದೊರೆಯಬೇಕೆಂಬ ನಿಯಮವಿದೆ. ಆದರೆ ಶಿಕ್ಷಣ ಇಲಾಖೆಯಲ್ಲಿ ಕೆಲವರು ಈ ರೀತಿ ಸ್ವಂತ ಪ್ರತಿಭೆಯಿಂದ ಕಷ್ಟಸಾಧ್ಯ ಪರಿಶ್ರಮದಿಂದ ಉನ್ನತ ಪದವಿ ಗಳಿಸಿದರೂ ಅವರಿಗೆ ಯಾವುದೇ ಪುರಸ್ಕಾರ ದೊರಕುತ್ತಿಲ್ಲ. ಉದಾಹರಣೆಗೆ ಕನ್ನಡ, ಹಿಂದಿ, ವಿದ್ವಾನ್ ಆಗಿರುವವರು ಜ್ಯೇಷ್ಟತೆಯ ಆಧಾರದ ಮೇಲೆ ಪ್ರೌಢಶಾಲೆಗಳ ಮುಖ್ಯೋಪಾಧ್ಯಾಯರಾಗಬಹುದು. ಅದೇ ಶಿಕ್ಷಣದ ಒಂದು ಅಂಗವಾದ ಶಾರೀರಕ ಶಿಕ್ಷಣದ ಅಧ್ಯಾಪಕರು ಪದವೀಧರರಾದರೂ ಬಿ.ಎಡ್. ಪದವಿಯ ಎಲ್ಲಾ ಅಂಕಗಳನ್ನು ಒಳಗೊಂಡ ಬಿ.ಪಿ.ಎಡ್. ಪದವಿ ಪಡೆದರೂ ಅವರು ಮುಖ್ಯೋಪಾಧ್ಯಾಯರಾಗುವಂತಿಲ್ಲ. ಯಾವುದೇ ಕ್ರಾಪ್ಟ್ ಶಿಕ್ಷಕರು ಅಥವಾ ಬೋಧಕೇತರ ಸಿಬ್ಬಂದಿಯವರು ಪದವಿ ಗಳಿಸಿ ತರಬೇತಿ ಪಡೆದಿದ್ದರೂ

ಪ್ರೌಢಶಾಲಾ ಶಿಕ್ಷಕರಾಗುವಂತಿಲ್ಲ. ಇಂಥ ಕೆಲವರು ಎಂ.ಎ. ಎಂ.ಎಡ್. ಎಂ.ಪಿ.ಎಡ್. ಮೊದಲಾದ ಪದವಿಗಳನ್ನು ತಮ್ಮ ಸ್ವಂತ ಪ್ರತಿಭೆ, ಅನನ್ಯವಾದ ಅಧ್ಯಯನದಿಂದ ಗಳಿಸಿದವರಿದ್ದಾರೆ. ಉಚ್ಚ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಶಿಕ್ಷಣ ಇಲಾಖೆಗೆ ಕೀರ್ತಿ ತಂದವರಿದ್ದಾರೆ. ಬದುಕಿನ ಒಂದೆರಡು ದಶಕಗಳನ್ನು ಅಧ್ಯಯನ, ಅಧ್ಯಯನ ಕಾರ್ಯಕ್ಕೆ ಮುಡಿಪಾಗಿಟ್ಟು ಇಂಥ ಶಿಕ್ಷಕ ಬಂಧುಗಳ ಉತ್ಸಾಹದ ಕುಡಿ ಕಮರಬಾರದು. ನಿಯಮಗಳನ್ನು ತಿದ್ದುಪಡಿ ಮಾಡಿ ಅಂಥವರಿಗೆ ಸ್ಥಾನ ಬಡ್ತಿಯ. ಅರ್ಹತೆ ದೊರಕಿಸಬೇಕು. ಆದ್ದರಿಂದಾಗಿ ಶಿಕ್ಷಣ ಕ್ಷೇತ್ರದಲ್ಲಿ ಪ್ರತಿಭೆಗಳು ಪುರಸ್ಕೃತವಾಗಿ ಅರಳುವಂತಾಗಬೇಕು. ಅವರ ಪರಿಶ್ರಮಕ್ಕೆ ಯೋಗ್ಯತೆಗೆ ಸರಕಾರ ಸರಿಯಾದ ಗೌರವ ನೀಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಕೆ.ಜಿ. ಜಾರ್ಜ್ (ಶಿಕ್ಷಣ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಿ ಕೊಡುತ್ತೇನೆ.

ಶಾಸನ ರಚನಾ ಕಾರ್ಯಕಲಾಪಗಳು

1991ನೇ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿ) ಪರವಾಗಿ : ಮಾನ್ಯ ಅಧ್ಯಕ್ಷರೆ 1991ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1991ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿ) ಪರವಾಗಿ : ಮಾನ್ಯ ಅಧ್ಯಕ್ಷರೆ 1991ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ-1

ಪರ್ಯಾಲೋಚನಾ ಪ್ರಸ್ತಾವ

1991ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ 1991ನೇ ಸಾಲಿನ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು .

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಸನ್ಮಾನ್ಯ ಅಧ್ಯಕ್ಷರೆ ಬೆಂಗಳೂರು ಪ್ರಾಧಿಕಾರದ ಬಗ್ಗೆ ಸಾಕಷ್ಟು ಚರ್ಚೆಯನ್ನು ಎರಡು ಕಡೆಯ ಮಾನ್ಯ ಸದಸ್ಯರು ಮಾಡಿದ್ದಾರೆ. ಮೊದಲನೆಯದಾಗಿ ಆಡಳಿತಪಕ್ಷದ ಅನೇಕ ಸದಸ್ಯರು, ಹಿರಿಯರಾಗಿರತಕ್ಕಂಥ